(7)

## ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ., ರವರ ನಿಯಮ-72 ರಡಿ ಗಮನ ಸೆಳೆಯುವ ಸೂಚನೆಗೆ ಉತ್ತರ

### ಸೂಚನೆ

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ಕುಡಬಿ' ಸಮುದಾಯದ ಸುಮಾರು 1.25 ಲಕ್ಷ ಮಂದಿ ಇದ್ದಾರೆ. ಪರಿಶಿಷ್ಟ ಜಾತಿ ಪಟ್ಟಿಯಲ್ಲಿ 'ಕುಡುಂಬನ್' ಎಂದು ತಪ್ಪಾಗಿ ಹೆಸರು ಉಲ್ಲೇಖಿಸಿದ ಪರಿಣಾಮ ಕಳೆದ 70 ವರ್ಷಗಳಿಂದ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ 'ಕುಡುಬಿ' ಸಮುದಾಯಕ್ಕೆ ಸರ್ಕಾರದ ಯಾವುದೇ ಸವಲತ್ತುಗಳು ಸಿಗುತ್ತಿಲ್ಲ. 1956 ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ಕುಡುಬಿ' ಎಂದು ಜಾತಿಯನ್ನು ಸೇರಿಸುವ ಬದಲು 'ಕುಡುಂಬನ್' ಎಂದು ತಪ್ಪಾಗಿ ಸೇರಿಸಲಾಗಿದೆ.

'ಕುಡುಬಿ' ಜನಾಂಗದ ಕುಲಶಾಸ್ತ್ರೀಯ ಅಧ್ಯಯನದ ವರದಿ 2008 ರಲ್ಲಿ ಸರ್ಕಾರಕ್ಕೆ ಸಲ್ಲಿಕೆಯಾಗಿದ್ದು, ಅದರಲ್ಲಿ 'ಕುಡುಬಿ' ಜಾತಿಯನ್ನು ಪರಿಶಿಷ್ಟ ಜಾತಿಗೆ ಸೇರಿಸುವಂತೆ ಈಗಾಗಲೇ ಶಿಫಾರಸ್ಸುಸ ಮಾಡಲಾಗಿದೆ. ಆದರೆ ಅದು ಇನ್ನೂ ಕಾರ್ಯಗತಗೊಂಡಿಲ್ಲ.

ಸೂಕ್ತ ತಿದ್ದುಪಡಿ ಮಾಡುವ ಮೂಲಕ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ 'ಕುಡುಬಿ' ಎಂದು ಇದುವರೆಗೂ ಸೇರಿಸದೇ ಇರುವುದರಿಂದ, 'ಕುಡುಬಿ' ಸಮುದಾಯ ಇಂದಿಗೂ ಸರ್ಕಾರದ ಸವಲತ್ತುಗಳಿಂದ ವಂಚಿತರಾಗಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನವನ್ನು ಸೆಳೆಯಲು ಬಯಸುತ್ತೇನೆ.

### ಉತ್ತರ

ಭಾರತ ಸಂವಿಧಾನದ ಅನುಚ್ಛೇದ 341 (2) ರ ಪ್ರಕಾರ ಯಾವುದೇ ಜಾತಿ ಅಥವಾ ಉಪಜಾತಿಯನ್ನು ಪರಿಶಿಷ್ಟ ಪಟ್ಟಿಯಲ್ಲಿ ಸೇರಿಸುವ/ಬದಲಾಯಿಸುವ ಅಧಿಕಾರ ಭಾರತದ ಸಂಸತ್‌ಗೆ ಇರುತ್ತದೆ. ರಾಜ್ಯ ಸರ್ಕಾರಕ್ಕೆ ಈ ರೀತಿಯ ಅಧಿಕಾರ ಇರುವುದಿಲ್ಲ. ಆದ್ದರಿಂದ ಕುಡುಬಿ ಸಮುದಾಯವನ್ನು 'ಕುಡುಂಬಣ್' ಎಂದು ಪರಿಗಣಿಸಿ, ಪರಿಶಿಷ್ಟ ಜಾತಿ ಸೌಲಭ್ಯವನ್ನು ನೀಡಲು ಸಾಧ್ಯವಿರುವುದಿಲ್ಲ.

ಮುಂದುವರೆದು, ಪ್ರಸ್ತುತ ಕುಡುಬಿ ಸಮುದಾಯ ಕರ್ನಾಟಕ ಹಿಂದುಳಿದ ವರ್ಗಗಳ ಪ್ರವರ್ಗ-1 ರಲ್ಲಿರುತ್ತದೆ. ಕುಡುಬಿ ಸಮುದಾಯದ ಬೇಡಿಕೆಯಂತೆ 2017 ನೇ ಸಾಲಿನಲ್ಲಿ ಕುಲಶಾಸ್ತ್ರೀಯ ಅಧ್ಯಯನ ನಡೆಸಿ, ಕುಡುಬಿ ಸಮುದಾಯವನ್ನು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರಿಸಲು ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ ಮತ್ತು ಹೆಚ್ಚುವರಿ ಮಾಹಿತಿಯನ್ನು ಕೋರಿರುವ ಹಿನ್ನೆಲೆಯಲ್ಲಿ ಅದನ್ನು ಸಹ ಕಳುಹಿಸಲಾಗಿದೆ. ಪ್ರಸ್ತುತ ಪ್ರಕರಣ ಭಾರತ ಸರ್ಕಾರದ ಮಟ್ಟದಲ್ಲಿ ಬಾಕಿ ಇರುತ್ತದೆ.

**ಸಕಇ 72 ಎಸ್‌ಎಲ್‌ಪಿ 2024**

**(ಡಾ: ಹೆಚ್.ಸಿ.ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**

ಡಾ|| ಹೆಚ್.ಸಿ. ಮಹದೇವಪ್ಪ
ಸಮಾಜ ಕಲ್ಯಾಣ ಸಚಿವರು